"ಈಗ ಕಂಪನಿ ಹೇಗೆ ನಡಿತಾ ಇದೆ?"

"ತುಂಬಾ ನಷ್ಟದಲ್ಲಿದೆ, ಸಾರ್. ದೊಡ್ಡ ದೊಡ್ಡ ಕಾಂಟ್ರಾಕ್ಟುಗಳು ಕೈ ತಪ್ಪಿದವು. ಇಲ್ನೋಡಿ, ನಮ್ಮ ಬ್ಯಾಲೆನ್ಸ್‌ಶೀಟುಗಳು." ಪ್ರವೀಣ ಫೈಲೊಂದನ್ನು ನೀಡಿದ.

ಕರಮಚಂದ ಅದರಲ್ಲಿ ತಲೆ ಹುದುಗಿಸಿದ್ದಾಗ, ನಾನು ಕ್ಯಾಬಿನ್ನಿಂದ ಹೊರಬಿದ್ದು, ಕಚೇರಿಯೊಳಗೆ ತಪಾಸಣೆ ಆರಂಭಿಸಿದೆ. ನಾಗರಾಜು ಹಾಗೂ ಸುಬ್ಬಯ್ಯ ತಮ್ಮ ತಮ್ಮ ಕುರ್ಚಿಗಳಲ್ಲಿ ಮೌನವಾಗಿ ಕುಳಿತಿದ್ದರು. ಜವಾನ ತಮ್ಮು ಅತ್ತಿತ್ತ ಓಡಾಡುತ್ತಿದ್ದ. ಮಿಥಿಲಾ ಫೋನಿನಲ್ಲಿ ಮುಳುಗಿದ್ದಳು.

ಯಾವ ನಿರೀಕ್ಷೆಯಿಲ್ಲದಿದ್ದರೂ, ಸಮಗ್ರವಾಗಿ ತನಿಖೆ ಮಾಡುವುದು ನಮ್ಮ ರೂಢಿಯಾದುದರಿಂದ, ನಾನು ಬಹಳ ಮುತುವರ್ಜಿಯಿಂದಲೇ ಹುಡುಕಾಟದಲ್ಲಿ ತೊಡಗಿದ್ದೆ. ಕಪಾಟು, ಮೇಜುಗಳ ಸೆಳೆಖಾನೆ, ಕಸದ ಬುಟ್ಟಿ... ಎಲ್ಲವನ್ನೂ ಎಚ್ಚರಿಕೆಯಿಂದ ತಲಾಶು ಮಾಡತೊಡಗಿದೆ. ನನ್ನ ಯತ್ನ ವಿಫಲವಾಗಲಿಲ್ಲ! ಕಸದ ಬುಟ್ಟಿಯಲ್ಲಿ ಮುದ್ದೆಯಾಗಿ ಬಿದ್ದಿದ್ದ ಕಾಗದದ ತುಂಡು ಕಂಡು ಬೆಚ್ಚಿ ಬಿದ್ದೆ! ಅದು ಮಲೆನಾಡು ಬಿಲ್ಡರ್ಸ್ ಸಂಸ್ಥೆಗೆ ಮಾಡಿದ ಕೊರಿಯರಿನ ಚೀಟಿ. ಕೊರಿಯರ್ ಮಾಡಿದಾಕೆ ಮಿಥಿಲಾ!! ನಾನು ತಕ್ಷಣ ಅದನ್ನೆತ್ತಿಕೊಂಡು, ಕ್ಯಾಬಿನ್ನಿನತ್ತ ಹೆಜ್ಜೆ ಹಾಕಿದೆ. ಆಗ ಒಳಗಿನಿಂದ ಕರೆಗಂಟೆ ಸದ್ದು ಮಾಡಿತು. ತಮ್ಮು ನನಗಿಂತ ಮೊದಲು ಕ್ಯಾಬಿನೊಳಗೆ ನುಗ್ಗಿದ.

"ತಮ್ಮು, ಇದನ್ನ ಫೈಲ್ ಮಾಡು" ಮುತ್ತಪ್ಪ ಯಾವುದೋ ಫೈಲನ್ನು ನೀಡಿದ.

ಒಳಬಂದ ನನ್ನನ್ನು ಕಂಡು ಕರಮಚಂದನ ಮೊಗದಲ್ಲಿ ಅಚ್ಚರಿ.

"ಬಿದ್ದಪ್ಪ, ನಿನ್ಗೆ ಏನೋ ಸುಳಿವು ಸಿಕ್ಕಂತಿದೆ!"

ನಾನು ಕೊರಿಯರ್ ಚೀಟಿಯನ್ನು ಆತನೆದುರು ಹಿಡಿದೆ. ಪಾಲುದಾರರಿಬ್ಬರೂ ಅದರ ಮೇಲೆ ಕಣ್ಣು ಹೂಡಿದರು. ಎಲ್ಲರ ಮೊಗದಲ್ಲೂ ಅಚ್ಚರಿ.

"ಇದೇನಿದು! ಆಕೆಯನ್ನು ಕರೆಯಲೇ?" ಮುತ್ತಪ್ಪ ಪ್ರಶ್ನೆ ಹಾಕಿದ.

ಅದಕ್ಕೆ ಉತ್ತರಿಸದೆ, ಕರಮಚಂದ ಆ ಚೀಟಿಯನ್ನು ಪರಿಶೀಲಿಸಿದ. ಅದರಲ್ಲಿ ನಿನ್ನೆಯ ದಿನಾಂಕದ ಮೊಹರು ಇತ್ತು. ಅದನ್ನು ಗಮನಿಸುತ್ತಿದ್ದಂತೆ, ಕರಮಚಂದನ ಮೊಗದಲ್ಲಿ ಮುಗುಳ್ನಗು.

"ಏನ್ ಸಾರ್? ನಮ್ಗೆ ಆಕೆಯ ಮೇಲೆ ಅನುಮಾನವೇ ಬರಲಿಲ್ಲ!" ಪ್ರವೀಣ ಒರಟಾಗಿ ಹೇಳಿದ.

"ತಡೆಯಿರಿ. ಆಕೆಯನ್ನು ಕರೆಸುವ ಮೊದಲು ಈ ರಶೀದಿಯನ್ನು ಸರಿಯಾಗಿ ಗಮನಿಸಿ. ಬಿದ್ದಪ್ಪ, ನೀನು ತುಸು ಅವಸರ ಮಾಡಿದಂತಿದೆ. ಈ ರಶೀದಿಯಲ್ಲಿರುವ ಮೊತ್ತ ನೋಡಿದ್ದೀಯಾ? ಮುನ್ನೂರು ರೂಪಾಯಿಗಳು! ಆ ಟೆಂಡರ್ ಬಿಡ್ಡಿನ ಪ್ರತಿಯಾಗಿರುತ್ತಿದ್ದರೆ, ಕನಿಷ್ಠ ದರ, ಅಂದರೆ ಐವತ್ತು ರೂಪಾಯಿ ಆಗಬೇಕಾಗಿತ್ತು! ಇದರಲ್ಲಿ ಬರೆದಿದ್ದು ನೋಡು, ಒಂದು ಬಾಕ್ಸ್ ಎಂದಿದೆ!! ಅದು ಸಾಕಷ್ಟು ದೊಡ್ಡದಾಗಿಯೇ ಇರಬೇಕು. ಅದರಿಂದಾಗಿ, ದರ ಹೆಚ್ಚಾಗಿದೆ. ಜೊತೆಗೆ, ಈ ರಶೀದಿಯ ಮೇಲಿರುವ ಬರಹ ನೋಡು. ಇದು ಕೊರಿಯರ್ ಸಂಸ್ಥೆಯವರ ವಿಶೇಷ ಸೇವೆಯ ರಶೀದಿ. ಹೆಚ್ಚಾಗಿ ಹುಟ್ಟಿದ ಹಬ್ಬಕ್ಕೆ, ಅಥವಾ ವಿವಾಹ ವಾರ್ಷಿಕೋತ್ಸವಕ್ಕೆ ಆ ದಿವಸ ಬೆಳಗ್ಗೆ ಆರು ಗಂಟೆಗೆ ಡೆಲಿವರಿ ಮಾಡುವ ಸೇವೆಯ ರಶೀದಿಯಿದು! ಪ್ರಾಯಶಃ ಇದರಲ್ಲಿ ನಮೂದಿಸಿರುವ ವ್ಯಕ್ತಿಯ ಹುಟ್ಟಿದ ಹಬ್ಬಕ್ಕೆ ಮಿಥಿಲಾಳು ಉಡುಗೊರೆ ಕಳಿಸಿರಬೇಕು!! ಈಗ, ಆಕೆಯನ್ನು ಕರೆಸಿ, ವಿಚಾರಿಸಿ."

ಕರಮಚಂದ ಹೇಳಿದ್ದು ಸುಳ್ಳಾಗಲಿಲ್ಲ. ಆಕೆ ತನ್ನ ಪ್ರಿಯಕರನಿಗೆ ಉಡುಗೊರೆ ಕಳಿಸಿದ್ದಳಂತೆ! ನನಗಂತೂ ಬಹಳ ನಿರಾಶೆಯಾಯಿತು. ನಾನು ತುಸು ಗಮನವಿಟ್ಟು ನೋಡಿದ್ದರೆ, ಈ ವಿಷಯ ನನಗೇ ಹೊಳೆಯುತ್ತಿತ್ತು!! ಆದರೆ ಅಚ್ಚರಿಯಾಗುವಂತೆ, ನಾಗರಾಜು ಹಾಗೂ ಸುಬ್ಬಯ್ಯರನ್ನು ಕರೆಯಲು ಕರಮಚಂದ ಸೂಚಿಸಿದ. ಅವರಿಬ್ಬರೂ ಕ್ಯಾಬಿನ್ನಿನ ಒಳಗೆ ಬಂದರು.

"ತಮ್ಮು, ನೀನೀಗ ಟ್ಯಾಗ್ ಕಟ್ಟಿದ ಫೈಲು ಕೊಡು."